3. 1997-98 - 157

ಒಟ್ಟು : 456

ಇ) ರೂ. 153.10 ಲಕ್ಷಗಳು.

ವಿಷಯ: ಜಿಲ್ಲಾ ಬಳಕೆದಾರರ ದೂರು ಪರಿಹಾರ ವೇದಿಕೆಗಳಿಗೆ ಅಧ್ಯಕ್ಷರುಗಳ ನೇಮಕ.

1213 (1744)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲಾ ಬಳಕೆದಾರರ ದೂರು ಪರಿಹಾರ ವೇದಿಕೆಗಳಿಗೆ ಬಹಳಷ್ಟು ಅಧ್ಯಕ್ಷರ ನೇಮಕಾತಿ ಆಗಿಲ್ಲದಿರುವುದು ನಿಜವಲ್ಲವೇ?

ಆ) ಅಧ್ಯಕ್ಷರ ನೇಮಕವಾಗದಿರುವ ಬಳಕೆದಾರರ ಪರಿಹಾರ ವೇದಿಕೆಗಳು ಎಷ್ಟು?

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ನೇಮಕಾತಿ ನೆನೆಗುದಿ ಬೀಳಲು ಕಾರಣಗಳೇನು? ನೇಮಕಾತಿ ಯಾವಾಗ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಬಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ರಾಜ್ಯದ 22 ಜಿಲ್ಲಾ ಗ್ರಾಹಕರ ವೇದಿಕೆಗಳ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಗುಲ್ಬರ್ಗಾ, ಮೈಸೂರು, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲಾ ವೇದಿಕೆಗಳಿಗೆ ಅಧ್ಯಕ್ಷರ ನೇಮಕಾತಿ ಆಗಿರುತ್ತದೆ.

ಆ) ಐದು.

ಇ) ಅಧ್ಯಕ್ಷರು ನೇಮಕವಾಗದಿರುವ ಜಿಲ್ಲಾ ಗ್ರಾಹಕರ ವೇದಿಕೆಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಕೆಲಸ ಕಾರ್ಯಗಳು ಜರುಗಲು ಕ್ರಮ ವಹಿಸಲಾಗಿದೆ.

ಈ) ಈ ಐದು ಜಿಲ್ಲಾ ವೇದಿಕೆಗಳಿಗೆ ಅಧ್ಯಕ್ಷರ ನೇಮಕಾತಿ ಮಾಡಲು ಸೇವೆಯಲ್ಲಿರುವ ಜಿಲ್ಲಾ ನ್ಯಾಯಾಧೀಶರ ಪಟ್ಟಿಯನ್ನು ಕಳುಹಿಸಿ ಕೊಡುವಂತೆ ಮಾನ್ಯ

ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಕೋರಲಾಗಿದ್ದು, ಉಚ್ಚ ನ್ಯಾಯಾಲಯದಿಂದ ಜಿಲ್ಲಾ ನ್ಯಾಯಾಧೀಶರ ಪಟ್ಟಿಯು ಲಭಿಸಿದ ಕೂಡಲೇ ನೇಮಕಾತಿ ಮಾಡಲಾಗುವುದು.

ವಿಷಯ: ಬೀಡಿ ಕಾರ್ಮಿಕರ ವಸತಿ ಯೋಜನೆ.

12.14 (1741)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರುಗಳ ಸಂಖ್ಯೆ ಎಷ್ಟು?

ಆ) ಉಡುಪಿ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರುಗಳು ಅಧಿಕವಾಗಿ ಇರುವುದು ನಿಜವಲ್ಲವೇ?

ಇ) ಕ್ಷೇಂದ್ರ ಸರ್ಕಾರದ ಯೋಜನೆಯನ್ವಯ ಎಷ್ಟು ಬೀಡಿ ಕಾರ್ಮಿಕರುಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ? (ವಿವರ ನೀಡುವುದು)

ಈ) ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳು ಏನು? ಮಾಹಿತಿ ನೀಡುವುದು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಬೀಡಿ ಮತ್ತು ಸಿಗಾರ್ ಕಾಯ್ದೆ 1996ರ (ಉದ್ಯೋಗ ಮತ್ತು ಷರತ್ತುಗಳು) ಅಡಿಯಲ್ಲಿ ನೋಂದಣಿಯಾದ ಬೀಡಿ ಉದ್ಯಮಗಳಲ್ಲಿ ರಾಜ್ಯಾದ್ಯಂತ 2,92,380 ಬೀಡಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಆ) ಹೌದು.

ಇ) ಕೇಂದ್ರ ಸರ್ಕಾರದ ವಸತಿ ನೀಡುವ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 1560 ಮನೆಗಳನ್ನು ಕಟ್ಟಿ ವಿತರಣೆ ಮಾಡಲಾಗಿದೆ. ಅಂದರೆ,

1. ಚಾಮರಾಜನಗರ, ಮೈಸೂರು ಜಿಲ್ಲೆಯಲ್ಲಿ 425 ಮನೆಗಳು.

2. ಕ್ಯಾತಮಾರನಹಳ್ಳಿ, ಮೈಸೂರು ಜಿಲ್ಲೆಯಲ್ಲಿ 1000 ಮನೆಗಳು

3. ಸಾಗರ, ಶಿವಮೊಗ್ಗ ಜಿಲ್ಲೆಯಲ್ಲಿ 135 ಮನೆಗಳು

ಈ) ಬೀಡಿ ಕಾರ್ಮಿಕರಿಗೆ ಎಷ್ಟು ಸಾಧ್ಯವೋ ಅಷ್ಟು ಮನೆಗಳನ್ನು ಕಟ್ಟಿಸಲು